**<u>ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ</u>**

C.C.No.959/2011
CW6/PW5

| | |
|---|---|
| ಹೆಸರು | ಶಿವಾನಂದ ಶೆಟ್ಟರ |
| ತಂದೆ ಹೆಸರು | ಚಂದ್ರಶೇಖರ |
| ವಯಸ್ಸು | 37 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಮುಧೋಳ, ತಾಃ ಮುಧೋಳ |

**ದಿನಾಂಕಃ 24-09-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ ಃ- ಎ.ಪಿ.ಪಿ ರವರಿಂದ.</u>**

ದಿನಾಂಕ 28.07.2011 ರಂದು ಪೋಲಿಸರು ನನ್ನನ್ನು ಪಂಚನಾಮೆಗೆ ಕರೆಸಿದ್ದರು. ಸದರಿ ಸಮಯದಲ್ಲಿ ನನ್ನ ಜೊತೆ ಚಾಸಾ-7 ರವರು ಇದ್ದರು. ನಾವು ಮುಧೋಳದ ತಲಾಟಿ ಆಸ್ಪತ್ರೆ ಹತ್ತಿರ ಇರುವಾಗ ಸಿ.ಪಿ.ಐ ರವರು ತಮ್ಮ ಸಿಬ್ಬಂದಿ ಮುಖಾಂತರ ನಮ್ಮನ್ನು ಪೋಲಿಸ ಠಾಣೆಗೆ ಕರೆಯಿಸಿದ್ದರು. ನಂತರ ಪೋಲಿಸ ಠಾಣೆಯಲ್ಲಿ ಸಿ.ಪಿ.ಐ ರವರು ನಮಗೆ ಠಾಣೆಯಲ್ಲಿ ಇದ್ದ ಕಾಡಯ್ಯ ಪೂಜಾರಿ ಮತ್ತು ಈರಯ್ಯ ಮಠಪತಿ ಇವರಿಗೆ ತೋರಿಸಿದಾಗ ನಾವು ಆರೋಪಿತರಿಗೆ ವಿಚಾರಣೆ ಮಾಡಿದಾಗ ಅವರು ತಾವು ಮುಧೋಳದಲ್ಲಿ ಮೋಟಾರ ಸೈಕಲ ಮುಖಾಂತರ ವಾಕಿಂಗ್ ಬರುವ ಹೆಣ್ಣು ಮಕ್ಕಳು ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿರುತ್ತೇವೆ ಮತ್ತು ಅವುಗಳನ್ನು ಕಳ್ಳತನ ಮಾಡಿದ ಜಾಗೆಯನ್ನು ತೋರಿಸುತ್ತೇವೆ ಎಂದು ಹೇಳಿದರು. ನಂತರ ನಾವು, ಸಿ.ಪಿ.ಐ ಮತ್ತು ಆರೋಪಿತರು ಪೋಲಿಸ ಠಾಣೆಯ ಜೀಪದಲ್ಲಿ ಕುಳಿತಾಗ ಸದರಿ ಇಬ್ಬರೂ ಆರೋಪಿತರು ಜೀಪನ್ನು ಮುಧೋಳದ ಆನಂದ ನಗರಕ್ಕೆ ತೆಗೆದುಕೊಂಡು ಹೋಗಲು ಚಾಲಕನಿಗೆ ಹೇಳಿದರು. ನಂತರ ನಮ್ಮ ಜೀಪನ್ನು ಅದರ ಚಾಲಕನು ಆರೋಪಿತರು ಹೇಳಿದ ಹಾಗೇ ಚಲಾಯಿಸಿಕೊಂಡು ಬಂದು ಸದರಿ ಆನಂದ ನಗರದಲ್ಲಿರುವ ಮಾದನಶೆಟ್ಟಿ ಇವರ ಅಂಗಡಿ ಹತ್ತಿರ ಆರೋಪಿತರು ಹೇಳಿದ ಮೇರೆಗೆ ನೀಲ್ಲಿಸಿದನು. ನಂತರ ಆರೋಪಿತರು ಸದರಿ ಜಾಗೆಯನ್ನು ತೋರಿಸಿ ಸದರಿ ಜಾಗೆಯಲ್ಲಿಂದ ವಾಕಿಂಗಗೆ ಹೋಗುತ್ತಿದ್ದ ಹೆಣ್ಣು ಮಗಳ ಕೊರಳಿನಿಂದ ನಾವು ತಾಳಿ ಚೈನ ಎಳೆದುಕೊಂಡು ಹೋಗಿ ಕಳ್ಳತನ ಮಾಡಿರುತ್ತೇವೆ ಎಂದು ಹೇಳಿದರು.

ತದನಂತರ ಆರೋಪಿತರು ಇನ್ನೊಂದು ಕಳ್ಳತನ ಮಾಡಿದ ಜಾಗೆಯನ್ನು ತೋರಿಸುತ್ತೇವೆ ಎಂದು ಹೇಳಿದ ಮೇರಗೆ, ನಾವು, ಆರೋಪಿತರು, ಪೋಲಿಸರು ಜೀಪದಲ್ಲಿ ಕುಳಿತಾಳ ಆರೋಪಿತರು ಎಸ್.ಬಿ.ಐ ಕ್ವಾಲನಿಗೆ ಚಾಲನೆ ಮಾಡಲು ಹೇಳಿದರು. ನಂತರ ಆರೋಪಿತರು ಹೇಳಿದ ಹಾಗೇ ನಮ್ಮ ಜೀಪದ ಚಾಲಕನು

ಅದನ್ನು ಚಲಾಯಿಸಿಕೊಂಡು ಹೋಗಿ ಎಸ್.ಬಿ.ಐ ಕ್ವಾಲನಿಯ ಮಲ್ಲಮ್ಮ ಗುಡಿಯ ಹತ್ತಿರ ಬಂದಾಗ ಆರೋಪಿತರು ಸದರಿ ಜೀಪನ್ನು ನಿಲ್ಲಿಸಲು ಹೇಳಿದರು. ನಂತರ ನಾವೆಲ್ಲರೂ ಕೆಳಗೆ ಇಳಿದ ನಂತರ ಆರೋಪಿತರು ಅಲ್ಲಿ ಒಂದು ಸ್ಥಳವನ್ನು ತೋರಿಸಿ ಸದರಿ ಸ್ಥಳದಲ್ಲಿ ಆರೋಪಿತರು ಒಬ್ಬಳು ಹೆಣ್ಣು ಮಗಳು ವಾಕಿಂಗ್ ಹೋಗುತ್ತಿರುವಾಗ ಅವಳ ಕೊರಳಿನಿಂದ ಬಂಗಾರದ ಆಭರಣವನ್ನು ಕಿತ್ತುಕೊಂಡು ಕಳ್ಳತನ ಮಾಡಿರುತ್ತೇವೆ ಎಂದು ಹೇಳಿದರು. ಇದರ ಬಗ್ಗೆ ಸಿ.ಪಿ.ಐ ರವರು ನಮ್ಮ ಸಮಕ್ಷಮ ಸವಿಸ್ತಾರವಾದ ಪಂಚನಾಮೆಯನ್ನು ಮದ್ಯಾಹ್ನ 1-05 ದಿಂದ 1-55 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ತನ್ನ ಸಮಕ್ಷಮ ಮಾಡಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯ ನಿಜ ಪ್ರತಿಯನ್ನು ಈಗ ನಿಪಿ-16 ಎಂದು ಗುರುತಿಸಲಾಯಿತು. ನಾನು ಆರೋಪಿತನಾದ ಈರಯ್ಯ ಪೂಜಾರಿ ಇವನನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತನು ಗೈರು ಇದ್ದು ಆರೋಪಿತನ ಪರ ವಕೀಲರು ಆರೋಪಿತನನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಕಲಂ 317 ಸಿ.ಆರ್.ಪಿ.ಸಿ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.)

**ಪಾಟೀ ಸವಾಲು :- ಆರೋಪಿ ನಂ.1 ರವರ ಪರ ಶ್ರೀ ಎಸ್.ಸಿ.ಯು ವಕೀಲರಿಂದ.**

ನಾನು ತಲಾಟಿ ಆಸ್ಪತ್ರೆಯ ಮುಂದೆ ಹಾಗೇ ಸುಮ್ಮನೆ ನಿಂತಿದ್ದೇನು. ನನ್ನದು ಮತ್ತು ಸಿ.ಪಿ.ಐ ರವರದ್ದು ಬಹಳ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ನಮ್ಮನ್ನು ಪೋಲಿಸರು ಮುಂಜಾನೆ 11-00 ಗಂಟೆಗೆ ಕರೆದಿದ್ದರು. ನಮಗೆ ಎಲ್ಲ ಮಾಹಿತಿಯನ್ನು ಪೋಲಿಸರು ಹೇಳಿದರು ಎಂದರೆ ಸಾಕ್ಷಿಯು ಠಾಣೆಯಲ್ಲಿದ್ದ ಆರೋಪಿತರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಆರೋಪಿತರು ಇವರೇ ಇರುತ್ತಾರೆ ಎಂದು ಪೋಲಿಸರು ಹೇಳಿದ ಮೇರೆಗೆ ನಮಗೆ ತಿಳಿದು ಬಂದಿರುತ್ತದೆ ಎಂದರೆ ಸರಿ. ಆನಂದ ನಗರದ ಮಾದನಶೇಟ್ಟಿ ಇವರ ಅಂಗಡಿಯ ಮುಂದೆ ಬೀದಿ ದೀಪಗಳು ಇರುತ್ತವೆ ಮತ್ತು ಅಲ್ಲಿ ಸಾಕಷ್ಟು ಜನರು ಅಡ್ಡಾಡುತ್ತಾರೆ ಎಂದರೆ ಸರಿ. ಅದೇ ರೀತಿ ಮಲ್ಲಮ್ಮನ ಗುಡಿಯ ಹತ್ತಿರವು ಸಹ ಬೀದಿ ದೀಪಗಳು ಮತ್ತು ಸಾಕಷ್ಟು ಜನರು ಅಡ್ಡಾಡುತ್ತಾರೆ ಎಂದರೆ ಸರಿ. ಸದರಿ ನಿಪಿ-6 ಪಂಚನಾಮೆ ಕಾಲಕ್ಕೆ ಪೋಲಿಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಪೋಲಿಸರು ಯಾವುದೇ ಭಾವಚಿತ್ರಗಳನ್ನು ತೆಗೆಯದೆ ಇದ್ದರೂ ಸಹಿತ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿಂದ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳು ನನಗೆ ಮಾಹಿತಿ ಇರುವುದಿಲ್ಲ, ಪೋಲಿಸರು ಬರೆದ ಪಂಚನಾಮೆ ಮೇಲೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಪಂಚನಾಮೆಯನ್ನು ಓದಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹಿತ ನಾನು ಪೋಲಿಸರ

ಮಾತು ಕೇಳಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ನಿಪಿ-16 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2025.09.26 10:52:35 +0530